**ಓ ಎಸ್ ನಂಃ 10/2015**
**ಪಿ ಡಬ್ಲ್ಯೂ ಃ 2**

**ದಿಃ 29.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್ ಎಸ್ ವಕೀಲರಿಂದ :-**

ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದೇನೆ. ಮಾದಾಪಟ್ಟಣದಲ್ಲಿ ನರಸಿಂಹಯ್ಯ ಎಂಬ ಹೆಸರಿನವರು ಸುಮಾರು ವ್ಯಕ್ತಿಗಳು ಇದ್ದಾರೆ ಎಂದರೆ ಸರಿ. ನರಸಿಂಹಯ್ಯ ಎಂಬ ಹೆಸರಿನವರು ಸುಮಾರು ವ್ಯಕ್ತಿಗಳು ಇರುವ ಕಾರಣ ಅವರನ್ನು ಅಡ್ಡ ಹೆಸರಿನಿಂದ ಕರೆಯುತ್ತಾರೆ ಎಂದರೆ ಸರಿ. ಅಂಕಯ್ಯನ ಪಾಳ್ಯ, ಆಲಮ್ಮನ ಪಾಳ್ಯ, ಹುಲುವೇನಹಳ್ಳಿ ಗ್ರಾಮಗಳಲ್ಲಿ ನರಸಿಂಹಯ್ಯ ಎಂಬ ಹೆಸರಿನ ಹಲವಾರು ವ್ಯಕ್ತಿಗಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳ ಮನೆ ತಮ್ಮ ಮನೆಯ ಎದುರುಗಡೆ ಬರುತ್ತದೆ ಎಂದರೆ ಸರಿ. ಅಂಕಯ್ಯನ ಪಾಳ್ಯ ದಾಖಲೆ ಗ್ರಾಮ. ವಾದಿಗಳ ಮತ್ತು ತಮ್ಮ ಮನೆ ಎದುರುಗಡೆ ಇದ್ದರೂ ಸಹ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಪ್ರಸ್ತುತವಾಗಿ ಹೊನ್ನಗನಹಟ್ಟಿ ಗ್ರಾಮದಲ್ಲಿ ವಾಸವಾಗಿದ್ದೀರಿ ಎಂದರೆ ಸರಿಯಲ್ಲ. ವಾದಿಗಳು ತಮ್ಮ ದಾಯಾದಿಗಳು ಎಂದರೆ ಸಾಕ್ಷಿ ಅವರು ನಮ್ಮ ದೂರದ ಸಂಬಂಧಿಗಳು. ವಾದಿಗಳ ತಾತ ಮತ್ತು ತಮ್ಮ ತಾತ ಅಣ್ಣ ತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಪ್ರತಿವಾದಿಗಳ ವಿರುದ್ಧ ಮರಣ ಶಾಸನ ಪತ್ರಕ್ಕೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಿ ವಾದಿಯರು ನನಗೆ ಸುಮಾರು 45 ವರ್ಷಗಳಿಂದ ಪರಿಚಯ ಇರುತ್ತಾರೆ ಎಂದರೆ ಸಾಕ್ಷಿಯು 50 ವರ್ಷಗಳಿಂದ ಪರಿಚಯ ಇರುತ್ತಾರೆ. ವಾದಿಗಳು ನನಗೆ 50 ವರ್ಷಗಳ ಹಿಂದೆ ಪರಿಚಯ ಇರುವುದಿಲ್ಲ. ದಾವಾ ಸ್ವತ್ತುಗಳು ಮೂಲತಃ ಬೆಂಗಳೂರಿನ ವಾಸಿಯಾದ ರಂಗಸ್ವಾಮಯ್ಯ ಅಲಿಯಾಸ್ ಮಂಡಿ. ದಾವಾ ಷೆಡ್ಯೂಲ್ ಸ್ವತ್ತುಗಳ ಸರ್ವೆ ನಂ. 96/8 2 ಎಕರೆ 31 ಗುಂಟೆ ಮತ್ತು ಸರ್ವೆ ನಂ. 97/5 ರ ವಿಸ್ತೀರ್ಣ 2 ಎಕರೆ 6 ಗುಂಟೆ. ದಾವಾ ಸ್ವತ್ತುಗಳು ಅಜ್ಜನಹಳ್ಳಿ ಗ್ರಾಮಕ್ಕೆ ಸೇರಿದ ಸ್ವತ್ತುಗಳು.

ವಾದಿಗಳು ಹನುಮಯ್ಯನವರ ಸಂಬಂಧಿಕರು ಅಲ್ಲ ಎಂದರೆ ಸರಿ. ಪೂಜಅರಸಯ್ಯ ನವರಿಗೆ ಏಕೈಕ ಪುತ್ರ ಇದ್ದು ಅವರ ಹೆಸರು ಹನುಮಯ್ಯ ಎಂದರೆ ಸರಿ. ಹನುಮಯ್ಯನ ಹೆಂಡತಿಯ ಹೆಸರು ಮುತ್ತಮ್ಮ ಎಂದರೆ ಸರಿ. ಹನುಮಯ್ಯ ಮತ್ತು ಮುತ್ತಮ್ಮ ರವರು ಹರಿಜನ

**ಓ ಎಸ್ ನಂಃ 10/2015**

**ಪಿ ಡಬ್ಲ್ಯೂ ಃ 2**

ಕಾಲೋನಿಯ ವಾಸಿ ಎಂದರೆ ಸರಿ. ಮುತ್ತಮ್ಮ ನ ತವರು ಮನೆ ಸಹ ಹರಿಜನ ಕಾಲೋನಿ ಎಂದರೆ ಸರಿ. ಮುತ್ತಮ್ಮನ ತಮ್ಮನ ಹೆಸರು ಸಿದ್ದಪ್ಪ ಎಂದರೆ ಸರಿಯಲ್ಲ. ಅಂಕಯ್ಯನ ಪಾಳ್ಯದಲ್ಲಿ ಸಹ ನರಸಿಂಹಯ್ಯ ಎಂಬ ಹೆಸರಿನ ವ್ಯಕ್ತಿಗಳು ಸುಮಾರು ಜನ ಇದ್ದಾರೆ ಎಂದರೆ ಸರಿ. ಅದೇ ರೀತಿ ಆಲಮ್ಮನ ಪಾಳ್ಯದಲ್ಲಿ ಸಹ ನರಸಿಂಹಯ್ಯ ಎಂಬ ಹೆಸರಿನ ವ್ಯಕ್ತಿಗಳು ಸುಮಾರು ಜನ ಇದ್ದಾರೆ ಎಂದರೆ ಸರಿಯಲ್ಲ. ಹುನ್ನಿಗೆರೆ ಗ್ರಾಮದ ಮಾರಮ್ಮ ದೇವಸ್ಥಾನದ ಪೂಜಾರಿಯ ಹೆಸರು ನರಸಿಂಹಯ್ಯ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರಿದು ನರಸೇಗೌಡ ಎಂದು ಸಾಕ್ಷಿ ನುಡಿಯುತ್ತಾರೆ. ಹುಲುವೇನಹಳ್ಳಿ ಗ್ರಾಮದ ಈರಯ್ಯನ ಮೂರು ಮಕ್ಕಳುಗಳ ಹೆಸರುಗಳು ನರಸಿಂಹಯ್ಯ, ನರಸಿಂಹಯ್ಯ ಮತ್ತು ನರಸಿಂಹಯ್ಯ ಎಂದರೆ ಸರಿಯಲ್ಲ. ಸದರಿ ವಿಚಾರ ತಮಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ನರಸಿಂಹಯ್ಯ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಾನೇ ನರಸಿಂಹಯ್ಯ ಎಂದು ಸಾಕ್ಷ್ಯ ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**